**ಇ ಸಿ ಎ 22-23** **RW-1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 07.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಅರ್ಜಿದಾರ ಪರ ಶ್ರೀ ಎಂ ವಿ ಎಸ್, ವಕೀಲರಿಂದಃ**

2. ಮುಖ್ಯ ವಿಚಾರಣೆಗೆ ತಯಾರು ಮಾಡಲು ಕಚೇರಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ನನಗೆ ಮುಖ್ಯ ವಿಚಾರಣೆಯಲ್ಲಿರುವ ವಿಷಯ ಗೊತ್ತಿಲ್ಲ ಅಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆ ಸಲ್ಲಿಸುವ ಪೂರ್ವದಲ್ಲಿ ಚಾರ್ಜಶೀಟ ಹಾಗೂ ಪ್ರಥಮ ವರ್ತಮಾನ ವರದಿ, ಮತ್ತು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಇತರೆ ದಾಖಲೆ ನೋಡಿದ್ದೇನೆ. ಮಾಲಿಕ ಜಖಂ ಆದ ಬಗ್ಗೆ ಕ್ಲೇಮ ಫಾರ್ಮ ಕೊಟ್ಟಿದ್ದಾನೆ. ಕ್ಲೇಮ ಫಾರ್ಮ ನಮ್ಮ ಫೈಲದಲ್ಲಿ ಇಲ್ಲ. ಕ್ಲೇಮ ಫಾರ್ಮ ದಲ್ಲಿ ಮಾಲಿಕ ಎಲ್ಲಾ ವಿಷಯ ಬರೆದಿದ್ದಾರೆ ಅಂದರೆ ಸರಿ. ಓ ಡಿ ನಿಕಾಲಿಯಾಗಿದೆ ಅಂದರೆ ಸರಿ. ಕಾನೂನು ಪ್ರಕಾರ ಮಾಲಿಕನಿಗೆ ಹಣ ಕೊಟ್ಟಿದ್ದೇವೆ ಅಂದರೆ ಸರಿ. ಕ್ಲೇಮ ಫಾರ್ಮ ಈ ಪ್ರಕರಣಕ್ಕೆ ಮುಖ್ಯ ಅಂದರೆ ಸರಿ. ಓ ಡಿ ಕ್ಲೇಮದಲ್ಲಿ ಅವಶ್ಯಕತೆ ಇದೆ. ಅದರ ಪ್ರತಿ ನಮ್ಮ ಕಚೇರಿಯಲ್ಲಿದೆ. ಕ್ಲೇಮ ಫಾರ್ಮ ಹಾಗೂ ಸರ್ವೆ ವರದಿ ಗಳನ್ನು ಮುಂದಿನ ಮುಖ್ಯ ವಿಚಾರಣೆಯಲ್ಲಿ ಹಾಜರಪಡಿಸುತ್ತೇನೆ.

**ಮುಂದಿನ ಪಾಟಿ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.